ತನ್ನ ಅಪ್ಪುಗೆಯನ್ನು ಸಡಿಲಗೊಳಿಸುತ್ತಾ 'ಎಷ್ಟು ದಿನ ಇಲ್ಲಿರುವೆ?' ಎಂದಳು.

'ಮೂರು ದಿನ' ಎಂದೆ.

'ಹಾಗಾದರೆ, ಈ ಮೂರು ದಿನ ಇಬ್ಬರೂ ಒಟ್ಟಾಗಿ ಇರಲು ಸಾಧ್ಯವೇ?' ಎಂದಳು.

ಅರ್ಥವಾಗದವನಂತೆ, 'ಅಂದರೆ...' ಎಂದೆ.

'ನಾವಿಬ್ಬರೂ ಈ ಮೂರು ದಿನಗಳನ್ನು ಒಟ್ಟಾಗಿ ಕಳೆಯೋಣವೇ?' ಪ್ರತಿ ಪದವನ್ನೂ ಒತ್ತಿ ಹೇಳಿದಳು. 'ಸರಿ' ಎಂಬ ಉತ್ತರದ ನಿರೀಕ್ಷೆಯ ತವಕವಿತ್ತು.

ನೀಲಿ ಕಣ್ಣು, ಬಂಗಾರದ ಕೂದಲು, ಪಿಂಕ್ ಬಣ್ಣ, ಕೆಂಪು ತುಟಿ, ಸುಂದರ ವದನ, ಒಯ್ಯಾರವಾದ ಮೈಮಾಟ ಒಟ್ಟು ಮೊತ್ತವಾಗಿ ಬರುತ್ತೇನೆಂದಾಗ ಬೇಡ ಎನ್ನುವುದಾದರೂ ಹೇಗೆ?!

ಆದರೆ 'ಆಗಲಿ' ಎನ್ನಲು ಭಯ. ಹೀಗೆ ಜತೆ ಇರುವುದಾಗಿ ಹೇಳಿ ಹಣಕಾಸು ಪಾಸ್‌ಪೋರ್ಟ್‌ಗಳನ್ನು ದೋಚಿಕೊಂಡು ಹೋಗುವ ಕತೆಗಳನ್ನು ಕೇಳಿದ್ದೇನೆ. ಇವಳು ಅಂತಹವಳಂತೆ ಕಾಣಲಿಲ್ಲ. ಚಪಲ ಮಂಕು ಮಾಡುತ್ತಿದೆಯೇ? ಹಲವು ಸಲ appearances are deceptive. ಬುದ್ಧಿ ಎಚ್ಚರಿಸಿದರೆ ಮನಸ್ಸು ಮೊಂಡು ಹಿಡಿಯಿತು. ಕೊನೆಗೆ 'yes' ಎಂದು ಹೇಳಿದ್ದು ಮನಸ್ಸೇ, ದೇಹವೇ, ಬುದ್ಧಿಯೇ?!...

ಈಗ ಹೆಚ್ಚು ಬಿಗಿಯಾಗಿಯೇ ತಬ್ಬಿಕೊಂಡಳು. ಜ್ವಾಲಾಮುಖಿಯೊಂದು ಅಪ್ಪಿಕೊಂಡಂತಿತ್ತು. ನಾನು ಲಾವಾವಾಗಿ ಕರಗಿದೆ.

★★★

ಪ್ಯಾಕ್ ಮಾಡಿಕೊಂಡು ಹೋದ ತಿಂಡಿ, ಕಾಫಿಯನ್ನು ಒಟ್ಟಿಗೆ ಸೇವಿಸಿದೆವು. 'ನನಗೆ ಕಾಫಿ ಬಹಳ ಇಷ್ಟ, ನಿಮಗೂ ಇಷ್ಟವಿರಬೇಕಲ್ಲವೇ?' ಎಂದು ಮುಂದುವರಿಸುತ್ತಾ, 'ನೀವು ಬೆಳಗ್ಗೆ ಕಣ್ಣು ಮುಚ್ಚಿಕೊಂಡು ಚಪ್ಪರಿಸುತ್ತಾ ಕಾಫಿ ಕುಡಿದದ್ದನ್ನು ನೋಡಿದೆ' ಎಂದಳು. 'ಓ, ನಾನು ಹಾಗೆ ಕಾಫಿ ಕುಡಿಯುತ್ತೇನೆಯೇ?' ಎಂದೆ. 'yes that looks beautiful' ಎಂದಳು. ಕಾಂಪ್ಲಿಮೆಂಟ್‌ಗಳಿಗೆ ಪ್ರತಿಕ್ರಿಯಿಸುವುದು ನನಗೆ ತಿಳಿಯದು. ಅನೇಕ ಸಲ ಅದು ಔಪಚಾರಿಕವೋ, ಮುಖಸ್ತುತಿಯೋ, ವ್ಯಂಗ್ಯವೋ, ನಿಜವೋ ಅರ್ಥವಾಗುವುದಿಲ್ಲ. ಸುಮ್ಮನೆ ತುಟಿ ಬಿರಿಯದೆ ಒಂದು ಸಣ್ಣ ಮುಗುಳ್ನಗು, ಅಷ್ಟೇ!

ಹಿಂತಿರುಗಿ ಬಂದ ಮೇಲೆ ಸಂಜೆ ಸಿಗುತ್ತೇನೆ ಎಂದು ನನ್ನ ಕಾಟೇಜ್ ನಂಬರ್ ಕೇಳಿ ಹೋದಳು. ನನ್ನ ಕಾಟೇಜಿಗೆ ಬಂದು ಹಾಸಿಗೆಯ ಮೇಲೆ ಮೈಚಾಚಿದೆ. ಮೈ ಮನಸ್ಸು ಹಗುರವಾಗಿತ್ತು.

ಬಾಗಿಲು ತಟ್ಟಿದ ಶಬ್ದ ಕೇಳಿ ಬೆಚ್ಚಿ ಎದ್ದೆ. ಬಹಳ ಸಮಯದಿಂದ ಯಾರೋ ಬಾಗಿಲು ಬಡಿಯುತ್ತಿದ್ದಾರೆ ಎಂದನಿಸಿತು. ಓ, ಹನ್ನೊಂದು ಗಂಟೆಗೆ ಮಲಗಿದವನು. ಈಗ ನಾಲ್ಕು ಗಂಟೆ. ಎದ್ದು ಹೋಗಿ ಬಾಗಿಲು ತೆರೆದೆ. ಹೊರಗೆ ವೆರೋನಿಕ, ಕೈಚೀಲ, ಸೂಟ್‌ಕೇಸ್‌ಗಳು ಜತೆಗಿದ್ದವು. ಬಹಳ ಸಮಯದಿಂದ ಬಾಗಿಲು ತಟ್ಟುತ್ತಿದ್ದೇನೆ 'May I' ಎನ್ನುತ್ತಾ ಒಳಗೆ ಬಂದಳು. ರೂಂ ತುಂಬ ಚಿಟ್ಟೆಗಳು ಹಾರಿದವು. 'ನಿದ್ದೆ ಮಾಡುತ್ತಿದ್ದೆಯಾ?' ಎಂದಳು. 'ಹೌದು, ಗೊತ್ತೇ ಆಗಲಿಲ್ಲ' ಎಂದೆ. 'ಮನಸ್ಸು ಹಗುರವಾಗಿರುವಾಗ ಹಾಗೆಯೇ' ಎಂದು ನಕ್ಕಳು. ಇವಳಿಗೆ ಹೇಗೆ ಗೊತ್ತು ನನ್ನ ಮನಸ್ಸು ಹಗುರವಾಗಿದೆ ಎಂದು. ಮಾಟಗಾತಿಯೇ? ಮನಸ್ಸನ್ನು ಓದಲು ಬರುತ್ತದೆಯೇ? ಹೆದರಿಕೆಯಾಯಿತು.

'ಕಾಫಿ ಹೇಳೋಣವೆ? ನೀನು ಕಾಫಿ ಕುಡಿಯುವುದನ್ನು ನಾನು ನೋಡಬೇಕು.' ನನಗೇಕೋ